ಎಂದು ಶಂಕ್ರಣ್ಣನೂ, ಗಜಾನನನೂ ಒಂದೊಂದು ದಿಕ್ಕಿಗೆ ಹುಡುಕುತ್ತ ಹೊರಟರು.

ಗಿರಿಜತ್ತಿಗೆಗೆ, ಅತ್ತ ಕಡೆ ಶೋಭನಿಗೂ ಬೇಡವೆಂದರೂ ತಲೆ ತುಂಬ ಕೆಟ್ಟ ಕೆಟ್ಟ ಯೋಚನೆಗಳೇ ಇಣುಕುತ್ತಿತ್ತು. ಸ್ಕೂಟಿ ಏನಾದರೂ ಮಗುಚಿ ಬಿತ್ತಾ... ಅಥವಾ ತಲೆ ಗಿಲೆ ಕೆಟ್ಟು ಗಣೇಶಪಾಲಿನಲ್ಲಿ ನೀರಿನಾಟಕ್ಕೆ ಇಳಿದು ಸುಳಿ ಗಿಳಿಗೆ ಸಿಲುಕಿದರಾ? ದೇವರು ದಿಂಡರಿಗೆಲ್ಲಾ ಹರಕೆ ಹೊತ್ತಿದ್ದೇ ಹೊತ್ತಿದ್ದು. ಅವರಿಬ್ಬರೂ ಸುಖವಾಗಿ ಮನೆ ತಲುಪಿದರೆ ಜೋಡು ಕಾಯಿ ಒಡೆಯುತ್ತೇನೆ ಎಂದೂ, ಅವರಿಬ್ಬರ ಮದುವೆಯ ಮರುದಿನವೇ ಕುಲದೇವರ ಮನೆಗೆ ಹೋಗಿ ಇಬ್ಬರ ಕೈಯಿಂದಲೂ ಉಡಿ ತುಂಬಿಸುತ್ತೇನೆ ಎಂದೂ... ಮೊದಲನೆಯ ಹರಕೆಯನ್ನೇನೋ ಆಮೇಲೆ ಪೂರೈಸಿದ್ದಾಗಿದೆ. ಎರಡನೇಯ ಹರಕೆ ಇನ್ನೂ ಬಾಕಿಯಿತ್ತು.

ಮನೆಯಲ್ಲೆಲ್ಲಾ ಕಂಗಾಲಾಗಿ ಕುಳಿತಿದ್ದರೆ, ವೇಣು ಮತ್ತು ರಾಧಾ ಇಬ್ಬರೂ ರಾತ್ರಿ ಹನ್ನೊಂದರ ಆಸುಪಾಸು ನಗುತ್ತಾ ಸ್ಕೂಟಿಯಿಂದ ಇಳಿದು ಬರುತ್ತಿದ್ದಾರಲ್ಲ! ಇಷ್ಟೊತ್ತೂ ಅವರಿಗಾಗಿ ಕಂಗೆಟ್ಟಿದ್ದು, ಹರಕೆ ಹೊತ್ತಿದ್ದೆಲ್ಲವೂ ಒಮ್ಮೆಲೇ ಸಿಟ್ಟಾಗಿ ಮಾರ್ಪಟ್ಟಿತ್ತು. ಊರೂರು ಅಲೆದು ಬಂದ ಶಂಕರ, ನಾಗರಾಜರು ಅಲ್ಲೇ ಅಕ್ಕ ಪಕ್ಕ ಕುಳಿತು ಅಳುತ್ತಿದ್ದ ಭಾವೀ ಬೀಗಿತ್ತಿಯರೂ ಅವರಿಬ್ಬರ ನಗು ಮುಖ ನೋಡಿ ಮುಖ ಊದಿಸಿಕೊಂಡರು.

ಮಗನೆದುರು ಒಮ್ಮೆಯೂ ದನಿಯೆತ್ತದ ಮಗನ ಮುದ್ದಿನ ಅಪ್ಪ ಶಂಕ್ರಣ್ಣನೇ ದೊಡ್ಡ ಆವಾಜಿನಲ್ಲಿ, 'ಇದೇನು ಮನೆಗೆ ಬರುವ ಹೊತ್ತಾ? ಒಂದು ಫೋನು ಮಾಡಿ ತಿಳಿಸುವ ಪರಿಜ್ಞಾನ ಬೇಡವಾ? ನಿಮ್ಮಿಬ್ಬರ ಖುಷಿ ಮೋಜಿನಲ್ಲಿ ಮನೆಯವರಿಗೇನಾಗಬೇಡ ಎಂಬ ಖಬರಿದೆಯಾ?' ಎಂದು ಕಿರುಚಾಡಿದ. ವೇಣು ತಲೆ ತಗ್ಗಿಸಿಯೇ ನಿಂತಿದ್ದ.

ಶಂಕ್ರಣ್ಣನ ಕೋಪವೆಲ್ಲ ರಾಧೆಯ ಮೇಲೂ ತಿರುಗಿತು, 'ಹೋಗಿ ಹೋಗಿ ಇವನಿಗೆ ಹೇಳುತ್ತೇನಲ್ಲ ನಾನು, ಹೆಣ್ಣು ಹುಡುಗಿ ನೀನು... ನಿನಗಾದರೂ ಬುದ್ಧಿ ಬೇಡವಾ? ನೀನಾದರೂ ಅವನಿಗೆ ಹೇಳಬಾರದಿತ್ತಾ?'

ಇಷ್ಟು ಹೇಳಿದ್ದೇ ತಡ, 'ಅಪ್ಪ, ನೀವು ನನಗೇನೇ ಹೇಳಿ ತಗೊಳ್ಳುತ್ತೇನೆ, ಅವಳನ್ನು ಹೆಂಗಸಾ, ಹೆಮ್ಮಾರಿಯಾ ಎಂದು ಕೇಳುವ ಉಸಾಬರಿ ನಿಮಗೆ ಬೇಡ' ಎಂದು ಖಡಕ್ಕಾಗಿ ಹೇಳಿ ಮತ್ಯಾವ ಮಾತಿಗೂ ನಿಲ್ಲದೆ ರಾಧಾಳ ಜೊತೆ ಅತ್ತೆ ಮಾವರನ್ನೂ ಕಾಡ್ಮನೆಗೆ ಹೋಗಿ ಬಿಟ್ಟು ಬಂದ.

ಅದೇ ಕೊನೆ ಗಿರಿಜತ್ತಿಗೆಯ ಮನೆಯಲ್ಲಿ ರಾಧಾಳ ಬಗ್ಗೆ ಯಾರೂ ಕೊಂಕು ಮಾತಾಡಲಿಲ್ಲ, ಎಷ್ಟರ ಮಟ್ಟಿಗೆ ಎಂದರೆ ರಾಧೆ ಬಿಕ್ಕುತ್ತ ಎಲ್ಲ ಮುಗಿಯಿತು ಎಂದು ಫೋನು ಮಾಡಿದಾಗಲಾಗಲೀ, ಮಗ ದಾಡಿ ಮಾಡದೆ ಜೀವನವೇ ಮುಗಿಯಿತು ಎನ್ನುವ ಹಾಗೆ ಕೋಣೆ ಸೇರಿದಾಗಲೇ ಆಗಲಿ ರಾಧಾಳನ್ನು ವೇಣುವೂ ದೂರಿಲ್ಲ, ಗಿರಿಜತ್ತಿಗೆ ಶಂಕ್ರಣ್ಣನೂ ಕೂಡ.

ಇಂದೋ ನಾಳೆಯೋ ರಾಧಾ – ವೇಣು ಒಂದಾಗಬಹುದೆಂದು ಕಾಯುವುದೊಂದೇ ದಾರಿಯಾಗಿತ್ತು ಎರಡೂ ಮನೆಯವರಿಗೆ.

ಇದ್ದಕ್ಕಿದ್ದಂತೆ ನಾಗರಾಜ ಒಂದು ದಿನ ಬೆಳಿಗ್ಗೆ ಪ್ರತ್ಯಕ್ಷನಾಗಿ, 'ರಾಧಂಗೆ ಮದುವೆ ನಿಕ್ಕಿ ಆಗಿದೆ, ತೋಟ್ಮನೆಯ ಶೇಖರನೊಂದಿಗೆ. ಇನ್ನೆರಡು ತಿಂಗಳ ನಂತರ ಲಗ್ನಕ್ಕೆ ಮುಹೂರ್ತ' ಎಂದು ಸುದ್ದಿ ಸೊಗೆದ.

ಗಿರಿಜತ್ತಿಗೆ, ಶಂಕ್ರಣ್ಣನಿಗಂತೂ ಬಾಯಿಯೇ ಹೊರಳುತ್ತಿಲ್ಲ. ಒಂದು ರೀತಿಯಲ್ಲಿ ಶಾಕು ಹೊಡೆದವರಂತೆ ನೋಡತೊಡಗಿದರು. ನಾಗರಾಜನೇ ಮುಂದುವರೆಸಿ, 'ಶಂಕ್ರಣ್ಣ, ಇನ್ನು ಹದಿನೈದು ದಿನದಲ್ಲೇ ಲಗ್ನಕ್ಕೆ ಮುಹೂರ್ತ ಇತ್ತು. ನಮ್ಮ ಶೇಖರನೂ ಅದಕ್ಕೆ ಒಪ್ಪಿದ್ದ.